ರಾಜ್ಯದಲ್ಲಿನ ಕಿರಿಯ ಕಾಲೇಜುಗಳ ಬಗ್ಗೆ

೩೪೦. ಶ್ರೀ ಬಿ. ಪಾದೇಗೌಡ, ವಿ.ಸ.ಸ. (ಕಿರುಗಾವಲು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೮-೮೯ರ ಸಾಲಿನಲ್ಲಿ ಮಂಜೂರಾದ ಕಿರಿಯ ಕಾಲೇಜುಗಳ ಸಂಖ್ಯೆ ಎಷ್ಟು ?

ಆ) ಮಂಜೂರಾತಿ ಆದೇಶದಲ್ಲಿ ಯಾವ ಷರತ್ತನ್ನು ವಿಧಿಸಲಾಗಿದೆ ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ೬೬.

ಆ) ೧) ಮಂಜೂರಾತಿ ನೀಡಿರುವ ೬೬ ಕಾಲೇಜುಗಳು ಶಾಶ್ವತ ಅನುದಾನ ರಹಿತ ಎಂಬ ಷರತ್ತಿನ ಮೇರೆಗೆ ಸದರಿ ಕಾಲೇಜುಗಳ ಶಿಕ್ಷಣ ಸಂಸ್ಥೆಗಳು ಈ ಆದೇಶ ಹೊರಡಿಸಿದ ೩೦ ದಿನಗಳೊಳಗೆ ತಾವು ಅನುದಾನ ಬಯಸುವುದಿಲ್ಲವೆಂದು ಮುಚ್ಚಳಿಕೆ ಬರೆದು ಕೊಡಬೇಕು.

೨) ಅನುದಾನ ಸಂಹಿತೆಯ ನಿಯಮಾವಳಿಯಂತೆ ಸರ್ಕಾರಕ್ಕೆ ಕಟ್ಟಬೇಕಾಗಿರುವ ಮೊಬಲಗುಗಳನ್ನು ಕಟ್ಟಬೇಕು.

೩) ಆಯುಕ್ತರು ಸಾ.ಶಿ. ಇಲಾಖೆ ನಿರ್ದೇಶಕರು ಪದವಿಪೂರ್ವ ಕಾಲೇಜು ಇವರು ಕಲಾ ಮತ್ತು ವಾಣಿಜ್ಯ ವಿಭಾಗದಲ್ಲಿ ಒಂದೊಂದು ಸಂಯೋಜನೆಯನ್ನು ಮಂಜೂರು ಮಾಡುವರು.

ದೇವನಹಳ್ಳಿಯಲ್ಲಿ ಆಂಗ್ಲ ಮಾಧ್ಯಮ ಶಾಲೆ ಪ್ರಾರಂಭಿಸಲು ಅನುಮತಿಯ ಬಗ್ಗೆ

೧೭೨. ಶ್ರೀ ಪಿ.ಸಿ. ಮುನಿಸ್ವಾಮಯ್ಯ (ದೇವನ ಹಳ್ಳಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದೇವನಹಳ್ಳಿಯಲ್ಲಿ ಯಾವುದಾದರು ಆಂಗ್ಲ ಮಾಧ್ಯಮ ಶಾಲೆ ನಡೆಯುತ್ತಿದೆಯೇ ?

ಆ) ಇದಕ್ಕೆ ಸಂಬಂಧಿಸಿದಂತೆ ಯಾವುದಾದರು ಆಡಳಿತ ಮಂಡಳಿಯವರು ಪ್ರಸ್ತಾವನೆ ಸಲ್ಲಿಸಿದ್ದಾರೆಯೇ ?

ಇ) ಪ್ರಸ್ತಾವನೆ ಸಲ್ಲಿಸಿದಲ್ಲಿ ಸರ್ಕಾರವು ಆಂಗ್ಲ ಮಾಧ್ಯಮ ಶಾಲೆಯನ್ನು ದೇವನಹಳ್ಳಿಯಲ್ಲಿ ಪ್ರಾರಂಭಿಸಲು ೧೯೮೯-೯೦ನೇ ಸಾಲಿಗೆ ಅನುಮತಿ ನೀಡುವುದೆ.

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ನಡೆಯುತ್ತಿಲ್ಲ.

ಆ) ಇಲ್ಲ.

ಇ) ಪ್ರಶ್ನೆ ಉದ್ಭವಿಸದು.

ಶಿಕ್ಷಕರ ನೇಮಕಾತಿಯ ಬಗ್ಗೆ

೪೩೫. ಶ್ರೀ ಆರ್. ವೆಂಕಟರಾಮಯ್ಯನವರು(ಮುಳಬಾಗಿಲು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಪ್ರಾಥಮಿಕ ಪಾಧ್ಯವಿಂಕ ಹಾಗೂ ಪ್ರೌಢಶಾಲೆಗಳ ಸಂಖ್ಯೆ ಎಷ್ಟು ?

ಆ) ಪ್ರತಿ ವರ್ಗದ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಇ) ಪ್ರತಿ ವರ್ಗದ ಶಾಲೆಯಲ್ಲಿ ಸಿಬ್ಬಂದಿ ವರ್ಗದ ನಮೂನೆ ಎಷ್ಟು ?

ಈ) ಶಿಕ್ಷಕ ಮತ್ತು ವಿದ್ಯಾರ್ಥಿಗಳ ಅನುಪಾತಕ್ಕೆ ತಕ್ಕಂತೆ ಶಿಕ್ಷಕರ ಸಂಖ್ಯೆ ಕಡಿಮೆ ಇದೆಯೇ ?

ಉ) ಬೇಕಾಗಿರುವ ಶಿಕ್ಷಕರ ಹುದ್ದೆ ತುಂಬಲು ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

	ಪ್ರಾಥಮಿಕ	ಮಾಧ್ಯಮಿಕ	ಪ್ರೌಢಶಾಲೆ
ಅ)	೨೨,೨೦೬	೧೩,೫೦೦	೧,೪೧೪
ಆ)	ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ೫೭, ೯೬, ೧೫೮ ವಿದ್ಯಾರ್ಥಿಗಳಿರುತ್ತಾರೆ.		ಪ್ರೌಢಶಾಲೆಯಲ್ಲಿ ೧೦ ೨೨,೫೭೦ ವಿದ್ಯಾರ್ಥಿಗಳಿರುತ್ತಾರೆ.
ಇ)	ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ೧.೫೦ ಅನುಪಾತವಿದೆ.		ಪ್ರೌಢಶಾಲೆಗಳಲ್ಲಿ ೧.೫೫ ಅನುಪಾತವಿದೆ.
ಈ)	ಹೌದು	ಹೌದು	ಹೌದು
ಉ)	ಪ್ರಾಥಮಿಕ ಶಾಲೆಯಲ್ಲಿ ಖಾಲಿ ಹುದ್ದೆಗಳನ್ನು ತುಂಬಲು ಜಿಲ್ಲಾ ಆಯ್ಕೆ ಸಮಿತಿಯು ಮೂಲಕ ಈಗಾಗಲೇ ಕ್ರಮ ಕೈಗೊಂಡಿದೆ.		ಪ್ರೌಢಶಾಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ವಿಭಾಗ ಮಟ್ಟದ ಆಯ್ಕೆ ಸಮಿತಿಯು ಕ್ರಮ ಕೈಗೊಳ್ಳುತ್ತಿದೆ.

ಮಡಿಕೇರಿ ಜಿಲ್ಲೆಯ ಗಾಳಿಬೀಡು ಪ್ರದೇಶದಲ್ಲಿ ಚಹಾ ತೋಟದ ಬಗ್ಗೆ

೪೪೭. ಶ್ರೀ ಡಿ.ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಕೃಷಿ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ಸರ್ಕಾರವು ಅರಣ್ಯ ಅಭಿವೃದ್ಧಿ ನಿಗಮದ ಮುಖಾಂತರ ಕೊಡಗು ಜಿಲ್ಲೆ ಮಡಿಕೇರಿ ತಾಲ್ಲೂಕು, ಗಾಳಿಬೀಡು ಪ್ರದೇಶದಲ್ಲಿ ಚಹಾ ಯೋಜನೆ ಸ್ಥಾಪಿಸಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಇದಕ್ಕಾಗಿ ಮೆಚ್ಚ ಮಾಡಿರುವ ಒಟ್ಟು ಹೊತ್ತವೆಷ್ಟು ?

ಇ) ಈ ಯೋಜನೆಯಡಿ ಬರುವ ಒಟ್ಟು ಹೆಕ್ಟೇರು ಪ್ರದೇಶಗಳು.

ಈ) ಈ ಯೋಜನೆಯು ಸಾಧ್ಯವಾಗುವ ಯೋಜನೆಯಾಗಿದೆಯೇ ?

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ವ್ಯವಸಾಯ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ಸರ್ಕಾರದ ಅರಣ್ಯ ಅಭಿವೃದ್ಧಿ ನಿಗಮ, ಮಡಿಕೇರಿ ಜಿಲ್ಲೆಯ ಗಾಳಿ ಬೀಡು ಪ್ರದೇಶದಲ್ಲಿ ಚಹಾ ತೋಟವನ್ನು ಪ್ರಾಯೋಗಿಕವಾಗಿ ಬೆಳೆಸುತ್ತಿದ್ದಾರೆ.

ಆ) ಸುಮಾರು ೪೨.೫೦ ಲಕ್ಷ ರೂ.ಗಳು.

ಇ) ಪ್ರಾಯೋಗಿಕವಾಗಿ ೫೫.೯ ಹೆಕ್ಟೇರ್‌ಗಳಲ್ಲಿ ಬೆಳೆಸಲಾಗಿದೆ.

ಈ) ಟೀ ಬೆಳೆಸುವ ಯೋಜನೆ ಇನ್ನು ಸರ್ಕಾರದ ಪರಿಶೀಲನೆಯಲ್ಲಿದೆ.

ಅಧ್ಯಕ್ಷರು.—ಪ್ರಶ್ನೋತ್ತರ ಪಟ್ಟಿಗಳನ್ನು ಸಭೆಯ ಮುಂದಿಡಲಾಯಿತು.